# ಅಪೊಸ್ತಲರ ಕೃತ್ಯ ಪುಸ್ತಕದ ರೂಪು ರೇಖೆ

I. ಯೆರೂಸಲೇಮಿನಲ್ಲಿ ಸಾಕ್ಷಿ (1-7).
  A. ಅಧ್ಯಾಯ 1: ಕಾಯುವ ಸಮಯ.
    1. ಪ್ರಾಸ್ತಾವಿಕ ಹೇಳಿಕೆ (ವಚನಗಳು 1, 2).
    2. ದಿವಾರೋಹಣ (ವಚನಗಳು 3-11).
    3. ಯೆರೂಸಲೇಮಿನಲ್ಲಿ ಕಾಯುವಿಕೆ (ವಚನಗಳು 12-14).
    4. ಯೂದನ ಬದಲು ಆಯ್ಕೆ (ವಚನಗಳು (15-26).
  B. ಅಧ್ಯಾಯ 2: ಸಭೆಯು ಸ್ಥಾಪಿಸಲ್ಪಟ್ಟದ್ದು.
    1. ಬಲವು ಬಂದದ್ದು (ವಚನಗಳು 1-13).
    2. ಮೊದಲು ಸುವಾರ್ತಾ ಪ್ರಸಂಗ (ವಚನಗಳು 14-36).
    3. ಮೊದಲ ವಿಶ್ವಾಸಿಗಳು (ವಚನಗಳು 37-41).
    4. ಆದಿ ಕ್ರೈಸ್ತ ಸಭೆಯ ಸಂಕ್ಷಿಪ್ತ ವಿವವರಣೆ (ವಚನಗಳು 42-47).
  C. ಅಧ್ಯಾಯ 3: ಸುವಾರ್ತೆಯು ಸಾರಲ್ಪಟ್ಟದ್ದು.
    1. ಕುಂಟನು ಗುಣಹೊಂದಿದ್ದು (ವಚನಗಳು 1-11).
    2. ಅಪೂರ್ಣವಾದ ಪ್ರಸಂಗ (ವಚನಗಳು 12-26).
  D. ಆಧ್ಯಾಯ 4: ಹಿಂಸೆಯ ಪ್ರಾರಂಭ.
    1. ಪೇತ್ರ ಮತ್ತು ಯೋಹಾನರು ಸೆರೆಹಿಡಿಯಲ್ಪಟ್ಟದ್ದು (ವಚನಗಳು 1-31).
    2. ಎಲ್ಲಾ ಸಂಗತಿಗಳನ್ನು ಸಮಾನವಾಗಿ ಹೊಂದುವದು (ವಚನಗಳು 32-37).
  E. ಆಧ್ಯಾಯ 5: ಸಭೆಯ ಶಿಸ್ತು - ಮತ್ತು ಇನ್ನೂ ಹೆಚ್ಚು ಹಿಂಸೆ.
    1. ಸಭೆಯ ಶಿಸ್ತಿನ ಮೊದಲ ಸಂದರ್ಭ (ವಚನಗಳು 1-11).
    2. ಜನಪ್ರಿಯತೆ ಹೆಚ್ಚಿದ್ದು (ವಚನಗಳು 12-16).
    3. ಹೆಚ್ಚು ಹಿಂಸೆ (ವಚನಗಳು 17-42).
  F. ಅಧ್ಯಾಯ 6: ಸಭೆಯ ಮೊದಲ “ಹಿರಿಯರನ್ನು” ಆಯ್ಕೆ ಮಾಡಿದ್ದು.
    1. ಸಭೆಯ ಐಕ್ಯತೆಗೆ ಅಪಾಯ; ಸೇವೆ ಮಾಡಲು ಏಳು ಜನರನ್ನು ಆಯ್ಕೆ ಮಾಡಿದ್ದು (ವಚನಗಳು 1-7).
    2. ಅದರಲ್ಲಿ ಒಬ್ಬ ಸೇವೆ ಮಾಡುವವ, ಸ್ತೇಫನನನ್ನು ಸೆರೆಹಿಡಿದದ್ದು (ವಚನಗಳು 8-15).
  G. ಅಧ್ಯಯ 7: ಮೊದಲ ಕ್ರೈಸ್ತ ರಕ್ತಸಾಕ್ಷಿ.
    1. ಸ್ತೇಫನನ ಪ್ರತಿಪಾದನೆ: ಯಹೂದ್ಯ ಇತಿಹಾಸದ ಪುನರ್ವಿಮರ್ಶೆ (ವಚನಗಳು 1-53).
    2. ಸ್ತೇಫನನ ಮರಣ (ವಚನಗಳು 54-60).

II. ಪಾಲೇಸ್ತೀನಿನ ಇತರ ಕಡೆಗಳಲ್ಲಿ ಸಾಕ್ಷಿ (8-12).
  A. ಅಧ್ಯಾಯ 8: ಕ್ರೈಸ್ತ ಸಭೆಯು ಚದುರಿದ್ದು.
    1. ಸೌಲನು ಸಭೆಯನ್ನು ಹಿಂಸಿಸಿದ್ದು (ವಚನಗಳು 1-4).
    2. ಫಿಲಿಪ್ಪನು ಸಮಾರ್ಯಕ್ಕೆ ಹೋದದ್ದು (ವಚನಗಳು 5-25).
    3. ಐಥಿಯೋಪ್ಯದವನ ಪರಿವರ್ತನೆ (ವಚನಗಳು 26-40).

B. ಅಧ್ಯಯ 9: ಒಬ್ಬ ಹಿಂಸಕನ ಪರಿವರ್ತನೆ - ಮತ್ತು ಪೇತ್ರನ ಪ್ರಯಾಣ.
  1. ಸೌಲನ ಪರಿವರ್ತನೆ (ವಚನಗಳು 1-18).
  2. ಸೌಲನ ಪ್ರಾರಂಭದ ಪರಿಶ್ರಮ (ವಚನಗಳು 19-31).
  3. ಪೇತ್ರನ ಮುಂದಿನ ಪ್ರಯಾಣಗಳು (ವಚನಗಳು 32-43).

C. ಅಧ್ಯಾಯ 10: ಅನ್ಯರಿಗೆ ಸುವಾರ್ತೆ ತಲುಪಿದ್ದು (1).
  1. ಒಬ್ಬ ಅನ್ಯ, ಕೋರ್ನೇಲ್ಯನು ಪೇತ್ರನನ್ನು ಕರೇ ಕಳುಹಿಸಿದ್ದು (ವಚನಗಳು 1-8).
  2. ಪೇತ್ರನ ದರ್ಶನ (ವಚನಗಳು 9-23).
  3. ಕೋರ್ನೇಲ್ಯನು ಮತ್ತು ಅವನ ಮನೆಯವರು ಪರಿವರ್ತನೆ ಹೊಂದಿದ್ದು (ವಚನಗಳು 24-48).

D. ಅಧ್ಯಾಯ 11: ಅನ್ಯರಿಗೆ ಸುವಾರ್ತೆ ಸಾರಲ್ಪಟ್ಟದ್ದು (2).
  1. ಪೇತ್ರನು ವಿಮರ್ಶಕರಿಗೆ ಮನವರಿಕೆ ಮಾಡಿದ್ದು (ವಚನಗಳು 1-18).
  2. ಅನ್ಯರಿಗೆ ಸುವಾರ್ತೆಯ ಪ್ರಸರಣ (ವಚನಗಳು 19-26).
  3. ಅನ್ಯರು ಯಹೂದ್ಯರಿಗೆ ಸಹಾಯ ಮಾಡುವದು (ವಚನಗಳು 27-30).

E. ಅಧ್ಯಾಯ 12: ಪ್ರಾರ್ಥನೆಯ ಬಲ.
  1. ಯಕೋಬನಿಂದ ಕೊಲ್ಲಲ್ಪಟ್ಟ ಮೊದಲ ಅಪೊಸ್ತಲನು (ವಚನಗಳು 1, 2).
  2. ಪೇತ್ರನು ಹೆರೋದನಿಂದ ಸೆರೆಹಿಡಿಯಲ್ಪಟ್ಟದ್ದು (ವಚನಗಳು 3-5).
  3. ದೇವರು ಪ್ರಾರ್ಥನೆಯನ್ನು ಉತ್ತರಿಸುತ್ತಾನೆ (ವಚನಗಳು 6-17)!
  4. ಹೆರೋದನ ಮರಣ (ವಚನಗಳು 18-24).
  5. ಬಾರ್ನಬ ಮತ್ತು ಸೌಲ ಸಿರಿಯದಲ್ಲಿನ ಅಂತಿಯೋಕ್ಯಕ್ಕೆ ಹಿಂತಿರುಗಿದರು (ವಚನ 25).

III. ಭೂಮಿಯ ಕಟ್ಟಕಡೆಯವರೆಗೆ ಸಾಕ್ಷಿಗಳಾಗಿರುವದು (13-28).

A. ಪೌಲನ ಸುವಾರ್ತಾ ಪ್ರಯಾಣ (13-21).
  1. ಅಧ್ಯಾಯ 13: ಪೌಲನ ಮೊದಲ ಸುವಾರ್ತಾ ಪ್ರಯಾಣ (1).
    a. ಬಾರ್ನಬ ಮತ್ತು ಸೌಲರು ದೇವರಾತ್ಮನಿಂದ ಆಯ್ಕೆಯಾದದ್ದು (ವಚನಗಳು 1-3).
    b. ಸಿರಿಯದಲ್ಲಿನ ಅಂತಿಯೋಕ್ಯದಿಂದ ಕುರಿ ದ್ವೀಪದವರೆಗೆ (ವಚನ 4).
    c. ಕುರ ದ್ವೀಪದಲ್ಲಿ: ಸಲಮೀ ಮತ್ತು ಪಾಫೋಸನಲ್ಲಿ (ವಚನಗಳು 5-12).
    d. ಪೆರ್ಗೆಗೆ (ವಚನ 13).
    e. ಪಿಸಿದ್ಯದಲ್ಲಿನ ಅಂತಿಯೋಕ್ಯಕ್ಕೆ (ವಚನಗಳು 14-52).
  2. ಅಧ್ಯಾಯ 14: ಪೌಲನ ಮೊದಲ ಸುವಾರ್ತಾ ಪ್ರಯಾಣ (2).
    a. ಲುಕುವೋನ್ಯದಲ್ಲಿ (ವಚನಗಳು 1-6).
    b. ಲುಸ್ತ್ರದಲ್ಲಿ (ವಚನಗಳು 7-20).
    c. ದೆರ್ಬೆಯಲ್ಲಿ (ವಚನ 21).
    d. ಹಿಂತಿರುಗಿ ಬಂದದ್ದು (ವಚನಗಳು 21-28).
  3. ಅಧ್ಯಾಯ 15: ಯೆರೂಸಲೇಮಿನಲ್ಲಿ ಹಿರೀ ಸಭೆಯ ಕೂಟ - ಮತ್ತು

ಪೌಲನ ಎರಡನೇಯ ಸುವಾರ್ತಾ ಪ್ರಯಾಣ (1).
   a. ಅನ್ಯ ಕ್ರೈಸ್ತರಿಗೆ ಮೋಶೆಯ ಧರ್ಮಶಾಸ್ತ್ರವನ್ನು ಬದ್ಧಮಾಡುವದು (ವಚನಗಳು 1, 2).
   b. ಯೆರೂಸಲೇಮಿನಲ್ಲಿ ಒಂದು ಕೂಟ; ಒಂದು ಪತ್ರ ಬರೆಯಲ್ಪಟ್ಟದ್ದು (ವಚನಗಳು 3-29).
   c. ಪೌಲ ಬಾರ್ನಬ ಮತ್ತು ಇತರರ ಪತ್ರವನ್ನು ತೆಗೆದುಕೊಂಡು ಸಿರಿಯದಲ್ಲಿನ ಅಂತಿಯೋಕ್ಯಕ್ಕೆ ತೆರಳಿದ್ದು (ವಚನಗಳು 30-35).
   d. ಮೊದಲ ಪ್ರಯಾಣದಲ್ಲಿ ಸ್ಥಾಪಿಸಲ್ಪಟ್ಟ ಸಭೆಗಳನ್ನು ಭೇಟಿಕೊಡುವ ಬಯಕೆ; ಪೌಲ ಮತ್ತು ಬಾರ್ನಬರ ಮಧ್ಯೆ ವಾಗ್ವಾದ (ವಚನಗಳು 36-39).
   e. ಪೌಲ ಸೀಲರು ಪೌಲನ ಎರಡನೇಯ ಸುವಾರ್ತಾ ಪ್ರಯಾಣಕ್ಕೆ ತೆರಳಿದ್ದು (ವಚನಗಳು 40, 41).
4. ಅಧ್ಯಾಯ 16: ಪೌಲನ ಎರನೇಯ ಸುವಾರ್ತಾ ಪ್ರಯಾಣ (2).
   a. ಇನ್ನೊಬ್ಬ ಪ್ರಯಾಣದ ಸಂಗಾತಿ (ವಚನಗಳು 1-3).
   b. "ಪಟ್ಟಣಗಳ ಮೂಲಕ" (ವಚನಗಳು 4, 5).
   c. ತ್ರೋವಕ್ಕೆ: "ಮೆಕೆದೋನ್ಯದ ಕರೆ" (ವಚನಗಳು 6-10).
   d. ಮೆಕೆದೋನ್ಯಕ್ಕೆ ಸಮುದ್ರ ಪ್ರಯಾಣ (ವಚನಗಳು 11, 12).
   e. ಫಿಲಿಪ್ಪಿಯಲ್ಲಿ: ಲುದ್ಯಳು ಮತ್ತು ಅವಳ ಮನೆಯವರ ಪರಿವರ್ತನೆ (ವಚನಗಳು 13-15).
   f. ಫಿಲಿಪ್ಪಿಯಲ್ಲಿ: ದೆವ್ವ ಹಿಡಿದ ಹುಡುಗಿಯ ಸ್ವಸ್ತತೆ ಮತ್ತು ಸೆರೆಮನೆಗೆ ಹಾಕಲ್ಪಟ್ಟದ್ದು (ವಚನಗಳು 16-24).
   g. ಫಿಲಿಪ್ಪಿಯಲ್ಲಿ: ಸೆರೆಮನೆಯ ಯಜಮಾನ ಮತ್ತು ಅವನ ಮನೆಯವರ ಪರಿವರ್ತನೆ (ವಚನಗಳು 25-34).
   h. ಫಿಲಿಪ್ಪಿಯಲ್ಲಿ: ಸೆರೆಮನೆಯಿಂದ ಬಿಡುಗಡೆ (ವಚನಗಳು 35-40).
5. ಅಧ್ಯಾಯ 17: ಪೌಲನ ಎರಡನೇಯ ಸುವಾರ್ತಾ ಪ್ರಯಾಣ (3).
   a. ಥೆಸಲೋನಿಕಕ್ಕೆ (ವಚನಗಳು 1-10).
   b. ಬೆರಿಯಕ್ಕೆ: "ಸದ್ಗುಣವುಳ್ಳ" ಜನರು (ವಚನಗಳು 11-15).
   c. ಅಥೇನದಲ್ಲಿ: ಪೌಲನ ಮನಸ್ಸು ಅವನಲ್ಲಿ ಕುದಿಯಿತು (ವಚನಗಳು 16-21).
   d. ಅಥೇನದಲ್ಲಿ: ಅರಿಯೋಪಾಗದ ಕುರಿತು ಪ್ರಸಂಗ (Mars' Hill) (ವಚನಗಳು 22-34).
6. ಅಧ್ಯಾಯ 18: ಪೌಲನ ಎರಡನೇಯ ಸುವಾರ್ತಾ ಪ್ರಯಾಣ (4) - ಮತ್ತು ಪೌಲನ ಮೂರನೇಯ ಸುವಾರ್ತಾ ಪ್ರಯಾಣ (1).
   a. ಕೊರಿಂಥದಲ್ಲಿ ಒಂದುವರೆ ವರ್ಷ (ವಚನಗಳು 1-17).
   b. ಎಫೆಸದಲ್ಲಿ ತಡೆದು ಪೌಲನು ಸಿರಿಯದಲ್ಲಿನ ಅಂತಿಯೋಕ್ಯಕ್ಕೆ ಹೋದನು (ವಚನಗಳು 18-22).
   c. ಪೌಲನ ಮೂರನೇಯ ಸುವಾರ್ತಾ ಪ್ರಯಾಣದ ಪ್ರಾರಂಭ (ವಚನ 23).
   d. ಉತ್ತಮ ಬೋಧಕನ ಪರಿಚಯಿಸುವಿಕೆ (ವಚನಗಳು 24-28).
7. ಅಧ್ಯಾಯ 19: ಪೌಲನ ಮೂರನೇಯ ಸುವಾರ್ತಾ ಪ್ರಯಾಣ (2).

a. ಎಫೆಸದಲ್ಲಿ: ಹನ್ನೆರಡು ಶಿಷ್ಯರ ಪುನಃ ದೀಕ್ಷಾಸ್ನಾನ (ವಚನಗಳು 1-7).
b. ಎಫೆಸದಲ್ಲಿ: ಪೌಲನ ಸೇವೆ ಮತ್ತು ಯೋಜನೆ (ವಚನಗಳು 8-22).
c. ಎಫೆಸದಲ್ಲಿ: ವೈರಿಗಳು (ವಚನಗಳು 23-41).

8. ಅಧ್ಯಾಯ 20: ಪೌಲನ ಮೂರನೇಯ ಸುವಾರ್ತಾ ಪ್ರಯಾಣ (3).
   a. ಮೆಕೆದೋನಿಯಕ್ಕೆ ಮತ್ತು ಗ್ರೀಸ ದೇಶಕ್ಕೆ ಭೇಟಿ ಮತ್ತೆ ಮೆಕೆದೋನಿಯಕ್ಕೆ, ಅಲ್ಲಿಂದ ತ್ರೋವಕ್ಕೆ ಪ್ರಯಾಣ (ವಚನಗಳು 1-6).
   b. ತ್ರೋವದಲ್ಲಿ: ರೊಟ್ಟಿಮುರಿಯುವ ದಿವಸದ ಸಭೆ (ವಚನಗಳು 7-12).
   c. ಯೆರೂಸಲೇಮಿನ ಮಾರ್ಗದಲ್ಲಿ (ವಚನಗಳು 13-16).
   d. ಮಿಲೇತದಲ್ಲಿ: ಎಫೆಸದ ಹಿರಿಯರೊಂದಿಗೆ ಗಂಭೀರವಾದ ಮಾತುಕತೆ (ವಚನಗಳು 17-38).
9. ಅಧ್ಯಾಯ 21: ಪೌಲನ ಮೂರನೇಯ ಸುವಾರ್ತಾ ಪ್ರಯಾಣ (4) - ಮತ್ತು ಯೆರೂಲೇಮಿನಲ್ಲಿ ಪೌಲನ ಸೆರೆಹಿಡಿಯಲ್ಪಟ್ಟದ್ದು.
   a. ಯೆರೂಸಲೇಮಿನ ದಾರಿಯಲ್ಲಿ: ತೂರ್, ಪ್ತೊಲೆಮಿಯ ಮತ್ತು ಕೈಸರೈಯದಲ್ಲಿ ನಿಂತದ್ದು (ವಚನಗಳು 1-17).
   b. ಪೌಲನು ಟೀಕೆಯನ್ನು ದೂರವಿರಿಸಿದ್ದು (ವಚನಗಳು 18-26).
   c. ಪೌಲನ ಸೆರೆಹಿಡಿಯಲ್ಪಟ್ಟದ್ದು (ವಚನಗಳು 27-36).
   d. ತನ್ನ ಪರವಾಗಿ ಪ್ರತಿವಾದ ಮಾಡಲು ಅವಕಾಶ ದೊರೆತದ್ದು (ವಚನಗಳು 37-40).

B. ಪೌಲನ ಸೆರೆ ಮತ್ತು ರೋಮಿಗೆ ಪ್ರಯಾಣ (22-28).
1. ಅಧ್ಯಾಯ 22: ಯೆರೂಸಲೇಮಿನಲ್ಲಿ ಪೌಲನ ಸೆರೆ (1).
   a. ಪೌಲನ ಪ್ರತಿವಾದ ಸಮರ್ಥನೆ (ವಚನಗಳು 1-22).
   b. ದಿಗ್ಭ್ರಾಂತನಾದ ಸಹಸ್ರಾಧಿಪತಿ (ವಚನಗಳು 23-30).
2. ಅಧ್ಯಾಯ 23: ಯೆರೂಸಲೇಮಿನಲ್ಲಿ ಪೌಲನ ಸೆರೆ (2) - ಮತ್ತು ಕೈಸರೈಯದಲ್ಲಿ ಪೌಲನ ಸೆರೆ (1).
   a. ಸನ್ಹೆದ್ರಿನ್ ಸಂಘದ ಎದುರು ಪೌಲನು (ವಚನಗಳು 1-10).
   b. ಉತ್ತೇಜನಕೊಡುವ ಒಂದು ದರ್ಶನ (ವಚನ 11).
   c. ಕೊಲೆ ಮಾಡುವ ಒಂದು ಸಂಚು ಬಯಲಾದದ್ದು (ವಚನಗಳು 12-22).
   d. ಕೈಸರೈಯಕ್ಕೆ ಪೌಲನು ಒಯ್ಯಲ್ಪಟ್ಟದ್ದು (ವಚನಗಳು 23-35).
3. ಅಧ್ಯಾಯ 24: ಕೈಸರಿಯದಲ್ಲಿ ಪೌಲನ ಸೆರೆ (2).
   a. ಫೆಲಿಕ್ಸ್‌ನ ಎದುರು ವಿಚಾರಣೆ (ವಚನಗಳು 1-23).
   b. "ನನಗೆ ಸಮಯ ದೊರೆತಾಗ": ಫೆಲಿಕ್ಸನು ಪರಿವರ್ತನೆ ಹೊಂದದೇ ಹೋದದ್ದು (ವಚನಗಳು 24-27).
4. ಅಧ್ಯಾಯ 25: ಕೈಸರೈಯದಲ್ಲಿ ಪೌಲನ ಸೆರೆ (3).
   a. ಫೆಸ್ತನ ಮುಂದಿನ ವಿಚಾರಣೆಯಲ್ಲಿ ಪೌಲನ ಕೈಸರನಿಗೆ ಮನವಿ ಮಾಡಿದ್ದು (ವಚನಗಳು 1-12).
   b. ಇಬ್ಬರು ವ್ಯಕ್ತಿಗಳು ಕೈಸರೈಯಕ್ಕೆ ಭೇಟಿಕೊಟ್ಟದ್ದು, ಬೋಧನೆಗೆ ಇನ್ನೊಂದು ಅವಕಾಶ (ವಚನಗಳು 13-27).
5. ಅಧ್ಯಾಯ 26: ಕೈಸರೈಯದಲ್ಲಿ ಪೌಲನ ಸೆರೆ (4).

a. ಅಗ್ರಿಪ್ಪನ ಎದುರು ಪೌಲನ ಪ್ರತಿವಾದ; ತಾನು ಬದಲಾದದ್ದು ಯಾಕೆ ಎಂದು ಹೇಳಿದ್ದು (ವಚನಗಳು 1-27).
b. "ಮನವಲಿಕೆಯ ಪ್ರಯತ್ನ," ಅರಸನಾದ ಅಗ್ರಿಪ್ಪನು ಪರಿವರ್ತನೆ ಹೊಂದದೆ ಹೋದದ್ದು (ವಚನಗಳು 28, 29).
c. ಮುಂದಿನ ನಿಲುಗಡೆ: ರೋಮ್ (ವಚನಗಳು 30-32).

6. ಅಧ್ಯಾಯ 27: ರೋಮ್ ಪಟ್ಟಣಕ್ಕೆ ಪೌಲನ ಪ್ರಯಾಣ (1).
   a. ಪ್ರಯಾಣದ ಪ್ರಾರಂಭ (ವಚನಗಳು 1-8).
   b. ಪೌಲನಿಂದ ಎಚ್ಚರಿಸಲ್ಪಟ್ಟದ್ದು (ವಚನಗಳು 9-12).
   c. ಸಮುದ್ರದಲ್ಲಿನ ಸಾಹಸಗಳು (ವಚನಗಳು 13-44).
7. ಅಧ್ಯಾಯ 28: ರೋಮ್ ಪಟ್ಟಣಕ್ಕೆ ಪೌಲನ ಪ್ರಯಾಣ (2).
   a. (ಮಲೀತೆ) ದ್ವೀಪದಲ್ಲಿನ ಸಾಹಸ (ವಚನಗಳು 1-10).
   b. ಪ್ರಯಾಣ ಮುಂದುವರಿದದ್ದು; ರೋಮಕ್ಕೆ ಹಿಂತಿರುಗಿದ್ದು (ವಚನಗಳು 11-16).
   c. ವಿಚಾರಣೆಗಾಗಿ ಕಾಯುವದು (ವಚನಗಳು 17-31).

**ಮುಕ್ತಾಯ**

ಜಯದ ಧ್ವನಿಯಿಂದ ಅಪೊಸ್ತಲರ ಕೃತ್ಯ ಪುಸ್ತಕವು ಅಂತ್ಯಗೊಳ್ಳುತ್ತದೆ: "ತರುವಾಯ ಅವನು ತಾನೇ ಮಾಡಿಕೊಂಡಿದ್ದ ಬಾಡಿಗೆ ಮನೆಯಲ್ಲಿ ಪೂರಾ ಎರಡು ವರ್ಷ ಇದ್ದು ತನ್ನ ಬಳಿಗೆ ಬರುವವರೆಲ್ಲರನ್ನು ಸೇರಿಸಿಕೊಂಡು ಯಾವ ಅಡ್ಡಿಯೂ ಇಲ್ಲದೇ ತುಂಬಾ ಧೈರ್ಯದಿಂದ ದೇವರ ರಾಜ್ಯವನ್ನು ಪ್ರಸಿದ್ಧಿ ಪಡಿಸುತ್ತಾ ಕರ್ತನಾದ ಯೇಸು ಕ್ರಿಸ್ತನ ವಿಷಯವಾಗಿ ಉಪದೇಶ ಮಾಡುತ್ತಾ ಇದ್ದನು." (ಅಪೊಸ್ತಲರ ಕೃತ್ಯಗಳು 28:30, 31)!